**OS. No.46/2020**
**P.W-1**

**( ದಿನಾಂಕ.03-02-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು)**

**ಮುಂದುವರೆದ ಪಾಟೀ ಸವಾಲುಃ** ಶ್ರೀB.A. D ವಕೀಲರಿಂದ

4 ನೇ ವಾದಿ ನನ್ನ ತಾಯಿ ಎಂದರೆ ಸರಿ. ಅವರ ಆರೋಗ್ಯ ಸರಿಯಾಗಿದೆ ಮತ್ತು ನ್ಯಾಯಾಲಯಕ್ಕೆ ಬಂದು ಸಾಕ್ಷಿ ನುಡಿಯುವ ಸ್ದಿತಿಯಲ್ಲಿ ಇರುತ್ತಾರೆ. ನಮ್ಮ ಕುಟುಂಬದಲ್ಲಿ ನನ್ನ ತಂದೆ ಅನಿಲಕುಮಾರ ಅಂದರೆ 1 ನೇ ಪ್ರತಿವಾದಿ ಪ್ರಮುಖರು ಎಂದರೆ ಸರಿ. ನಾನು ಮತ್ತು ಉಳಿದ ವಾದಿಯರು ಒಂದೇ ಮನೆಯಲ್ಲಿ ಇರುತ್ತೇವೆ ಎಂದರೆ ಸರಿ. ನನ್ನ ತಂದೆ 1 ನೇ ಪ್ರತಿವಾದಿ ಮಾಡಿದ ಎಲ್ಲ ವ್ಯವಹಾರಗಳು ನನಗೂ ಮತ್ತು ಉಳಿದ ವಾದಿಯರಿಗೂ ಗೊತ್ತಿರುತ್ತವೆ ಎಂದರೆ ಸರಿಯಲ್ಲ. ನನ್ನ ತಂದೆಗೆ ಕುಟುಂಬದ ಅಡಚಣೆ ಸಲುವಾಗಿ ಜಮೀನು ಮಾರುವ ಅವಶ್ಯಕತೆ ಇತ್ತು ಎಂದರೆ ಸರಿಯಲ್ಲ. ಆ ಕಾರಣ ನನ್ನ ತಂದೆ ಮನೆಯ ಎಲ್ಲ ಸದಸ್ಯರ ಜೊತೆ ಚರ್ಚೆ ಮಾಡಿ ಊರಿನ ಪ್ರಮುಖರಿಗೆ ದಾವಾ ಸ್ವತ್ತನ್ನು ಮಾರಾಟ ಮಾಡುವುದು ಇದೆ ಎಂದು ತಿಳಿಸಿರುತ್ತಾರೆ ಎಂದರೆ ಸರಿಯಲ್ಲ. ಅದೇ ರೀತಿ ಊರಿನ ಎಲ್ಲ ಜನರಿಗೂ ಈ ವಿಷಯವನ್ನು ತಿಳಿಸಿರಿ ಹಾಗೂ ಹೆಚ್ಚಿನ ಹಣ ಬರಲಿ ಎಂಬ ಉದ್ದೇಶದಿಂದ ಪ್ರಚಾರ ಮಾಡಲಾಗಿತ್ತು ಎಂದರೆ ಸರಿಯಲ್ಲ.

2017 ರಲ್ಲಿ ನಮ್ಮ ಊರಿನ ಅಣ್ಣಾರಾವ ಕೇಶವರಾವ ಮಾಲೀಪಾಟೀಲರವರಿಗೆ ಈ ವಿಷಯ ತಿಳಿಸಿರುತ್ತ್ರೆರೆ ಎಂದರೆ ಸರಿಯಲ್ಲ.

ತದನಂತರ 2 ನೇ ಪ್ರತಿವಾದಿ ಬಂಡಯ್ಯರವರು 2017 ರಲ್ಲಿ ನನ್ನ ತಂದೆ-ತಾಯಿ ಸಮಕ್ಷಮ ಜಮೀನನ್ನು ಹೋಗಿ ನೋಡಿಕೊಂಡು ಬಂದಿರುತ್ತಾರೆ ಎಂದರೆ ಸರಿಯಲ್ಲ. ಆ ಸಂದರ್ಬದಲ್ಲಿ ದಾವಾ ಸ್ವತ್ತು ನಾಲೆಗಳು ಹರಿದು, ತುಂಬಾ ಕೆಟ್ಟು ಹೋಗಿತ್ತು ಎಂದರೆ ಸರಿಯಲ್ಲ. 2 ನೇ ಪ್ರತಿವಾದಿಗೆ ದಾವಾ ಆಸ್ತಿಗೆ ಸಂಬಂಧಪಟ್ಟಂತೆ ವ್ಯವಹಾರವನ್ನು ನನ್ನ ತಾಯಿ ಸಮಕ್ಷಮ ಮತ್ತು ಇತರ ಸಾಕ್ಷಿದಾರರ ಸಮಕ್ಷಮ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಕ್ರಯಪತ್ರದಲ್ಲಿ ತೋರಿಸಿದಂತೆ 2 ನೇ ಪ್ರತಿವಾದಿ ನನ್ನ ತಂದೆಗೆ ನನ್ನ ತಾಯಿ ಸಮಕ್ಷಮ ಮತ್ತು ಸಾಕ್ಷಿದಾರರ ಸಮಕ್ಷಮ ನೋಂದಣಿ ಕಾಲಕ್ಕೆ ಮುಟ್ಟಿಸಿರುತ್ತಾರೆ ಎಂದರೆ ಸರಿಯಲ್ಲ. ಸದರಿ ವ್ಯವಹಾರ ನನಗೂ ಮತ್ತು ಉಳಿದ ಎಲ್ಲ ವಾದಿಯರಿಗೂ ಕ್ರಯಪತ್ರ ಆದ ದಿನಾಂಕದಂದೇ ಗೊತ್ತಿರುತ್ತದೆ ಎಂದರೆ ಸರಿಯಲ್ಲ.

3 ನೇ ವಾದಿ ಜನ್ಮ ದಿನಾಂಕ ನಿಖರವಾಗಿ ಗೊತ್ತಿಲ್ಲ, ಆದರೆ 2002 ರಲ್ಲಿ ಜನಿಸಿರುತ್ತಾರೆ. 3 ನೇ ವಾದಿ ತಾನು ವಯಸ್ಕನಾದ ನಂತರ ಈ ದಾವೆ ಹೊರತುಪಡಿಸಿ ಬೇರೆ ದಾವೆಯನ್ನು ಸದರಿ ಕ್ರಯಪತ್ರ ತನಗೆ ಬಂಧನಕಾರಿಯಾಗುವುದಿಲ್ಲವೆಂದು ಹೂಡಿರುವುದಿಲ್ಲ. ಏಕೆಂದರೆ ಸದರಿ 2017 ರಲ್ಲಿ ಆದ ವ್ಯವಹಾರ ಆತನಿಗೂ ಗೊತ್ತಿತ್ತು, ಆ ಕಾರಣ ಆತ ವಯಸ್ಕನಾದ ನಂತರ ಬೇರೆ ದಾವೆ ಸಲ್ಲಿಸಿಲ್ಲ ಎಂದರೆ ಸರಿಯಲ್ಲ.

2017 ರಲ್ಲಿ ದಾವಾ ಸ್ವತ್ತಿನ ಜಮೀನು ಸ್ಥಿತಿಗತಿ ಚೆನ್ನಾಗಿ ಇರದೇ ಇರುವ ಕಾರಣ, ಕ್ರಯಪತ್ರದಲ್ಲಿ ತೋರಿಸಿದ ಹಣ ದಾವಾ ಸ್ವತ್ತಿಗೆ ಯೋಗ್ಯವಾಗಿರುತ್ತದೆ ಎಂದರೆ ಸರಿಯಲ್ಲ. ತದನಂತರ ನನ್ನ ತಂದೆ-ತಾಯಿ ಸಹಿ ಮಾಡಿದ ಎಲ್ಲ ರಸೀದಿಗಳನ್ನು 2 ನೇ ಪ್ರತಿವಾದಿ ಕಡೆಯಿಂದ ಕ್ರಯದ ವ್ಯವಹಾರ ಎಲ್ಲ ಮುಗಿದಿರುತ್ತದೆ, ಆ ಕಾರಣ ಕೊಡಿರಿ ಎಂದು ಪಡೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ.

ಕ್ರಯಪತ್ರದ ವ್ಯವಹಾರದ ಬಗ್ಗೆ 1 ನೇ ಪ್ರತಿವಾದಿಗೆ ಸಂಪೂರ್ಣ ಗೊತ್ತಿರುವ ಕಾರಣ, ಅದನ್ನು ಅವರು ಪ್ರಶ್ನೆ ಮಾಡಿಲ್ಲ ಎಂದರೆ ಸರಿಯಲ್ಲ. ನಿಪಿ-1 ನ್ನು ನಾವೇ ಪಡೆದುಕೊಂಡಿರುತ್ತೇವೆ. ನಿಪಿ-1 ರಲ್ಲಿ 2 ನೇ ಪ್ರತಿವಾದಿ ಬರೆದುಕೊಂಡಿದ್ದಾರೆ ಎಂದರೆ ಸರಿಯಲ್ಲ. ವಕೀಲರಿಂದ ಪಡೆದುಕೊಂಡಿರುತ್ತೇನೆ ಎಂದು ನುಡಿಯುತ್ತಾರೆ. ನಿಪಿ-1 ನ್ನು ನಾನು ಮತ್ತು ನಮ್ಮ ವಕೀಲರು ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ.ನಾನು 2 ನೇ ಪ್ರತಿವಾದಿಯಿಂದ ನಿಪಿ-1 ನ್ನು ಪಡೆದು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ದಾವಾ ಸ್ವತ್ತಿನ ಖರೀದಿಯಾದಾಗಿನಿಂದ 2 ನೇ ಪ್ರತಿವಾದಿಯೇ ದಾವಾ ಸ್ವತ್ತಿನಲ್ಲಿ ಕಬ್ಜೆ ಇರುತ್ತಾನೆ ಎಂದರೆ ಸರಿಯಲ್ಲ. ಕ್ರಯಪತ್ರನಾತೆಯಿಂದ 2 ನೇ ಪ್ರತಿವಾದಿ ಹೆಸರು ದಾವಾ ಸ್ವತ್ತುಗಳ RTC ಯಲ್ಲಿ ನಮೂದು ಆಗಿದ್ದು, ಅವುಗಳನ್ನು ಇಲ್ಲಿಯವರೆಗೂ ಕೂಡಾ ಪ್ರಶ್ನೆ ಮಾಡಿಲ್ಲ.ದಾವಾ ಆಸ್ತಿಗಳ ಜಮೀನುಗಳಲ್ಲಿ ನಮಗೆ ಪಾಲು ಕೇಳಲು ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ.

**P.W-1**

2 ನೇ ಪ್ರತಿವಾದಿಗೆ ನಷ್ಟ ಉಂಟು ಮಾಡುವ ಉದ್ದೇಶದಿಂದ 1 ನೇ ಪ್ರತಿವಾದಿ ಸುಳ್ಳು ಮಾತನ್ನು ಕೇಳಿ ಈ ಸುಳ್ಳು ದಾವೆ ಸಲ್ಲಿಸಿದ್ದೇವೆ ಎಂದರೆ ಸರಿಯಲ್ಲ. 2 ನೇ ಪ್ರತಿವಾದಿ ನಮ್ಮ ಕುಟುಂಬದ ಅಡಚಣೆ ನಂಬಿ ಸದ್ಭಾವನೆಯಿದ ದಾವಾ ಸ್ವತ್ತನ್ನು ಖರೀದಿ ಮಾಡಿರುತ್ತಾನೆ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳ ಜಮೀನುಗಳನ್ನು ಖಡಿರೀದಿಸಿದ ನಂತರ 2 ನೇ ಪ್ರತಿವಾದಿ ಲಕ್ಷಾಂತರ ರೂಪಾಯಿ ಖರ್ಚು ಮಾಡಿ ಅಭಿವೃದ್ದಿಪಡಿಸಿರುತ್ತಾನೆ ಎಂದರೆ ಸರಿಯಲ್ಲ. ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

**ಓ ಹೇ ಕೇ ಸರಿ ಇದೆ**

**ಹಿರಿಯ ಸಿವಿಲ್ ನ್ಯಾಯಾಧೀಶರು**
**ಆಳಂದ**